# ಹಸಿರ ಉಸಿರು ಹರಸಿದಾಗ

ಸಾಲು ಮರದ ತಿಮ್ಮಕ್ಕ ಉಡುಪಿಗೆ ಬಂದಾಗ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದು ಅವರಿಗೊಂದು ಕಾರ್ಟೂನ್ ಭಾವಚಿತ್ರ ನೀಡಿದೆ. ಆರು ತಿಂಗಳ ಹಿಂದೆ ನಡೆದ ಈ ಕಾರ್ಯಕ್ರಮ ಜೀವನದುದ್ದಕ್ಕೂ ನೆನಪಿನಂಗಳದಲ್ಲಿ ಉಳಿಯುವ ಘಟನೆಯಾಗಿ ಬಿಟ್ಟಿದೆ.

■ ಜೀವನ್ ಶೆಟ್ಟಿ





ಐದನೇ ಬಾರಿ ಅಜ್ಜಿ ಉಡುಪಿಗೆ ಬರುತ್ತಿರುವ ಸುದ್ದಿ ಕಂಡು ಮನಸ್ಸು ಅರಳಿತ್ತು. ಇದು ನಡೆದದ್ದು ಆರು ತಿಂಗಳ ಹಿಂದೆ. ಈ ಮೊದಲು ನಾಲ್ಕು ಬಾರಿ ಈ ವೃಕ್ಷಪ್ರಿಯೆ ಬಂದಾಗ ಒಮ್ಮೆಯೂ ಭೇಟಿಯಾಗಲು ಸಾಧ್ಯವಾಗಲಿಲ್ಲ. ಅವರೇ ಶತಾಯುಷಿ ತಿಮ್ಮಕ್ಕ! ಹಸಿರಿಗೆ ಇನ್ನೊಂದು ಹೆಸರು 'ಸಾಲು ಮರದ ತಿಮ್ಮಕ್ಕ'.

ಜಾಗತಿಕ ತಾಪಮಾನ ಏರಿಕೆಯ ಕುರಿತು ವಿಶ್ವದೆಲ್ಲೆಡೆ ಚರ್ಚೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸೇವೆ ಮಾಡಿದ ತಿಮ್ಮಕ್ಕ ತುಂಬಾ ಪ್ರಸ್ತುತವಾಗುತ್ತಾರೆ. ಈ ಬಗ್ಗೆ ಎಷ್ಟೋ ವರ್ಷಗಳ ಹಿಂದೆ ಆಲೋಚನೆ ಮಾಡಿದ್ದ ಹಿರಿಯ ಜೀವವನ್ನು ಬಿಬಿಸಿಯವರೂ ಗುರುತಿಸಲು ಇದೇ ಕಾರಣ. ದೇಶದ ಅತ್ಯುನ್ನತ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದ ಕಾರಣ ಕೂಡ ಹಸಿರನ್ನು ಉಸಿರಾಗಿಸಿಕೊಂಡದ್ದಕ್ಕೆ ಎಂಬುದು ಗಮನಾರ್ಹ. ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರಿಂದ ಪ್ರಶಸ್ತಿ ಸ್ವೀಕರಿಸಿ ಪ್ರಥಮ ಪ್ರಜೆಯನ್ನೇ ತನ್ನ ಕೈಗಳಿಂದ ಹರಸಿದ ಸುದ್ದಿ ಜನಜನಿತವಾಗಿತ್ತು. ಅಜ್ಜಮ್ಮನ ಮುಗ್ಧತೆಗೆ ಇಡೀ ರಾಷ್ಟ್ರವೇ ಮೆಚ್ಚುಗೆ ಸೂಚಿಸಿದ ಉದಾಹರಣೆ ಈ ತನಕ ಇರಲಿಲ್ಲ! ದೇಶವನ್ನೇ ಹರಸಿದ ಅಪರೂಪದಲ್ಲಿ ಅಪರೂಪದ ಸನ್ನಿವೇಶ ಅದು. ಪ್ರತಿಯೊಬ್ಬ ಪ್ರಜೆಯಲ್ಲೂ ಪರಿಸರ ಪ್ರೀತಿ ಹುಟ್ಟುವಂತೆ ಮಾಡಿದ ದಿನ!

ಪತ್ರಿಕೆಗಳಲ್ಲಿ ಆ ಸುದ್ದಿ ಕಂಡಾಗ ನನಗೂ ಅಜ್ಜಮ್ಮನ ಆಶೀರ್ವಾದ ಪಡೆದ ಆ ಕ್ಷಣಗಳು ಕಣ್ಣಮುಂದೆ ಬಂದವು. ಸಂದರ್ಭ ಮಾತ್ರ ಬೇರೆ ಆಗಿತ್ತು. ಕರಾವಳಿಯ ನಿರೂಪಕ ಅವಿನಾಶ್ ಕಾಮತ್ ಸಂಯೋಜನೆಯಲ್ಲಿ ಮೂಡಿಬಂದ 'ಹೆಜ್ಜೆ ಗುರುತು' ಎಂಬ ಕಾರ್ಯಕ್ರಮ ಇನ್ನೂ ನೆನಪಿದೆ. ನಾನು ತಿಮ್ಮಕ್ಕನವರಿಗೆ ಉಡುಗೊರೆಯಾಗಿ ನೀಡಲು ಅವರ ಕಾರ್ಟೂನ್ ಭಾವಚಿತ್ರವೊಂದನ್ನು ತೆಗೆದುಕೊಂಡು ಹೋಗಿದ್ದೆ. ಅದನ್ನು ನಾನು ಸಮರ್ಪಿಸುತ್ತಿದ್ದಂತೆ ಅವರು ನನ್ನ ತಲೆ ಮೇಲೆ ಕೈಯಿರಿಸಿ ನುಡಿದ ಮಾತುಗಳು ನೆರೆದ ಪ್ರೇಕ್ಷಕರ ಕರತಾಡನದ ಸದ್ದಿನಲ್ಲಿ ಕರಗಿ ಒಂದು ಶಕ್ತಿ ವರ್ಗಾವಣೆಗೊಂಡಿತು!

ಕಾರ್ಯಕ್ರಮದಲ್ಲಿ ಸಾಧಕಿಯ ಯಶೋಗಾಥೆಯನ್ನು ಅಜ್ಜಿಯ ದತ್ತು ಪುತ್ರ ಉಮೇಶ್ ಅವರು ಸವಿವರವಾಗಿ ಬಿಚ್ಚಿಟ್ಟಾಗ ಕಣ್ಣು ತುಂಬಿ ಬಂತು. ನಡು ನಡುವೆ ಡ್ರಾಮಾ ಜೂನಿಯರ್ಸ್ ಕ್ಲಿಪ್ಪಿಂಗ್, ಬಿಬಿಸಿ ವರದಿ ಸೇರಿದಂತೆ ಹಲವಾರು ಅಪರೂಪದ ವಿಷುಯಲ್ಸ್ ಮತ್ತು ಹಾಡುಗಳ ಮೂಲಕ 2 ಗಂಟೆಗಳ ಕಾಲ ಅಜ್ಜಿಯ ಜೀವನ ಪಯಣವನ್ನು ವಿನೂತನವಾಗಿ ತೆರೆದಿಡಲಾಯಿತು. ಅವರ ಬಗ್ಗೆ ಈ ಹಿಂದೆ ಅಲ್ಪಸ್ವಲ್ಪ ತಿಳಿದಿತ್ತು. ಈಗ ಸಂಪೂರ್ಣವಾಗಿ ವಿವರಗಳು ತಿಳಿದು ಬಂದಾಗ ಜಗತ್ತಿನಲ್ಲಿ ಇಂಥ ಜನರೂ ಇರುವರಲ್ಲ ಎಂದು ಧನ್ಯತಾಭಾವ ಮೂಡಿತು.

ಹಸುರತ್ತಲ್! ಹಸುರಿತ್ತಲ್! ಹಸುರೆತ್ತಲ್ ಕಡಲಿನಲಿ ಹಸುರ್ ನೆತ್ತರ್ ಒಡಲಿನಲಿ ಎಂದು ಪ್ರಕೃತಿಯ ಬಗ್ಗೆ ಕುವೆಂಪು ಅವರ ನುಡಿಗಳು ನೆನಪಾಗುತ್ತವೆ. ಹಸಿರಿಗೆ ಮತ್ತೊಂದು ಹೆಸರು 'ಸಾಲು ಮರದ ತಿಮ್ಮಕ್ಕ'! ಗ್ಲೋಬಲ್ ವಾರ್ಮಿಂಗ್ ಕುರಿತು ವಿಶ್ವದೆಲ್ಲೆಡೆ ಚರ್ಚೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ಪರಿಸರ ಪ್ರೇಮಿ ತಿಮ್ಮಕ್ಕ ತುಂಬಾ ಪ್ರಸ್ತುತವಾಗುತ್ತಾರೆ. ಅಜ್ಜಿಯನ್ನು ಭೇಟಿಯಾಗುವ ಸದವಕಾಶ 'ಬೀಯಿಂಗ್ ಸೋಷಿಯಲ್' ಬಳಗ ಒದಗಿಸಿ ಕೊಟ್ಟು ನನ್ನ ಜೀವನದಲ್ಲಿ ಇಂಥ ಸವಿನೆನಪನ್ನು ಮೆಲುಕು ಹಾಕುವಂತೆ ಮಾಡಬಹುದೆಂದು ಎಂದೂ ಎಣಿಸಿರಲಿಲ್ಲ. ಅವರಿಗೆ ನೀಡಿದ ವ್ಯಂಗ್ಯ ಭಾವಚಿತ್ರ ಅವರ ಮನೆಯ ಗೋಡೆಯನ್ನು ಅಲಂಕರಿಸಿದೆ ಎಂದು ಇತ್ತೀಚೆಗೆ ಕೇಳ್ಪಟ್ಟೆ.

ಗುಬ್ಬಿ ತಾಲ್ಲೂಕಿನ ತನ್ನ ಊರಿನಲ್ಲಿ ತಿಮ್ಮಕ್ಕ ಬೆಳೆಸಿದ ಈ ಮರಗಳು ಚತುಷ್ಪಥವೆಂಬ ಹೆಸರಿನಲ್ಲಿ ಕ್ರೌರ್ಯಕ್ಕೆ ಬಲಿಯಾಗದಿರಲಿ. ತಿಮ್ಮಕ್ಕನ ಈ ಮಕ್ಕಳು ಸದಾ ಹಸುರಿನಿಂದ ಕಂಗೊಳಿಸಲಿ. ■